# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ

## ಉತ್ತರ ಕನ್ನಡ : ಕಾರವಾರ

**ಎಸ್ .ಸಿ ನಂ. 10/2019**

**ದೋ.ಸಾ. : ಫ್ರಾ.ಸಾ. : 03**

**ದಿನಾಂಕಃ 04-07-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಆರ್.ಕೆ .ಎಂ. ವಕೀಲರಿಂದ**

10. 1 ನೇ ಆರೋಪಿ ನನಗೆ ಪರಿಚಯ ಇರುವ ಬಗ್ಗೆ ಹಾಗೂ ಆತ ನಮ್ಮ ಮನೆಗೆ ಬಂದು ಹೋಗುತ್ತಿದ್ದ ಬಗ್ಗೆ ನನ್ನ ಬಳಿ ಫೋಟೊ ಇದೆ. ಸದರಿ ಫೋಟೊವನ್ನು ಪೋಲಿಸರಿಗೆ ನೀಡಿದ್ದಿರಾ? ಎಂದರೆ ಸಾಕ್ಷಿಯು ಪೋಲಿಸರು ಆ ಫೋಟೊವನ್ನು ಕೇಳಿರುವುದಿಲ್ಲ ಎಂದು ನುಡಿಯುತ್ತಾರೆ.

1 ನೇ ಆರೋಪಿ ನಮ್ಮ ಮನೆಯ 1 ಸಮಾರಂಭಕ್ಕೆ ಬಂದಿರುತ್ತಾನೆ ಹಾಗೂ ನಾವು ಸಹ ಆತನ ಮನೆಯ 1 ಸಮಾರಂಭಕ್ಕೆ ಹೋಗಿರುತ್ತೇವೆ. 1 ನೇ ಆರೋಪಿ ನಮ್ಮ ಮನೆಗೆ ಬಂದು ಹೋಗುತ್ತಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಹಾಗೂ ಮೃತ ಪ್ರೇಮಕುಮಾರನ ವಯಸ್ಸಿನ ಅಂತರ 3 ವರ್ಷಗಳು. ನಾನು ಮತ್ತು ಮೃತ ಪ್ರೇಮಕುಮಾರ ಪ್ರತ್ಯೇಕವಾಗಿ ವಾಸವಾಗಿರುತ್ತೇವೆ. ಮೃತ ಪ್ರೇಮಕುಮಾರ ಈ ಮೊದಲು ಕಟ್ಟಿಗೆ ವ್ಯಾಪಾರ ಮಾಡಿಲ್ಲ ಎಂದರೆ ಸರಿಯಲ್ಲ. ಈ ಬಗ್ಗೆ ಯಾವುದೇ ದಾಖಲೆ ನನ್ನ ಬಳಿ ಇಲ್ಲ. ಸೀ ಬರ್ಡ್ ನ ಟಗ್ ನಲ್ಲಿ ನಾನು ಕೆಲಸ ಮಾಡುತ್ತೇನೆ. ಮೃತ ಪ್ರೇಮಕುಮಾರ ಕೆಲಸ ಮಾಡುತ್ತಿದ್ದ ಸ್ಥಳ ಹಾಗೂ ನಾನು ಕೆಲಸ ಮಾಡುವ ಸ್ಥಳ ಸುಮಾರು 10 ಕಿ.ಮೀ ದೂರದ ಅಂತರದಲ್ಲಿರುತ್ತದೆ. 1 ನೇ ಆರೋಪಿ ಹಾಗೂ ಮೃತ ಪ್ರೇಮಕುಮಾರ ಶಿಪ್ಪಿಂಗ್ ಕಂಪನಿ ಪ್ರಾರಂಭ ಮಾಡುವ ಬಗ್ಗೆ ಮೃತ ಪ್ರೇಮಕುಮಾರ ನನ್ನ ಬಳಿ ಹೇಳಿರುತ್ತಾನೆ ಆದರೆ ಯಾವುದೇ ದಾಖಲೆಯನ್ನು ತೋರಿಸಿರುವುದಿಲ್ಲ. ಅವರು ಪ್ರಾರಂಭ ಮಾಡಬೇಕೆಂದಿದ್ದ ಕಂಪನಿಯ ಹೆಸರು ಕಾರವಾರ ಶಿಪ್ಪಿಂಗ್ ಏಜೆನ್ಸಿ ಆಗಿರುತ್ತದೆ. ಸದರಿ ಕಂಪನಿಯು ಕೆಲಸ ಮಾಡಲು ಪ್ರಾರಂಬಿಸಿರುತ್ತದೆ. ಕಂಪನಿಗೆ ಸಂಬಂದಿಸಿದ ಲೈಸೆನ್ಸ್ ನ್ನು ಪ್ರೇಮಕುಮಾರ 1 ನೇ ಆರೋಪಿಗೆ ನೀಡಿರುತ್ತಾನೆ. ಸದರಿ ಲೈಸೆನ್ಸ್ ನ್ನು ನಾನು ನೋಡಿರುವುದಿಲ್ಲ. 1 ನೇ ಆರೋಪಿ ಎಂದಿಗೂ ಪ್ರೇಮಕುಮಾರನೊಂದಿಗೆ ಕಂಪನಿ ಪ್ರಾರಂಭ ಮಾಡಬೇಕೆಂದಿರಲಿಲ್ಲ ಎಂದರೆ ಸರಿಯಲ್ಲ. ಪ್ರೇಮಕುಮಾರ ಲೈಸೆನ್ಸ್ ನ್ನು 2017 ರಲ್ಲಿ ತೆಗೆದುಕೊಂಡಿರುತ್ತಾನೆ ಮತ್ತು 1 ನೇ ಆರೋಪಿ ಸಹ 2017 ರಲ್ಲಿ ತೆಗೆದುಕೊಂಡಿರುತ್ತಾನೆ.

11. ಪೊಯಿನೂರು ಶಿಪ್ಪಿಂಗ್ ಕಂಪನಿಯಲ್ಲಿ ಪ್ರೇಮಕುಮಾರ ಮ್ಯಾನೇಜರ್ ಆಗಿದ್ದ ಹಾಗೂ ಪಾಲುದಾರನಾಗಿದ್ದ. ಸದರಿ ಕಂಪನಿಯ ಪಾಲುದಾರಿಕೆ ದಸ್ತಾವೇಜ್ ಮತ್ತೊಬ್ಬ ಪಾಲುದಾರನಾದ ಮಂಗಳೂರಿನ ಶರೀಪ್ ಎನ್ನುವರ ಬಳಿ ಇರುತ್ತದೆ. ನಾನು ಹೇಳುವಂತಹ ಪೊಯಿನೂರು ಶಿಪ್ಪಿಂಗ್ ಕಂಪನಿ ಅಸ್ತಿತ್ವದಲ್ಲಿ ಇರಲಿಲ್ಲ, ಪ್ರೇಮಕುಮಾರ ಅದನ್ನು ನೋಡಿಕೊಳ್ಳುತ್ತಿರಲಿಲ್ಲ ಹಾಗೂ ಪಾಲುದಾರನಾಗಿರಲಿಲ್ಲ ಎಂದರೆ ಸರಿಯಲ್ಲ. ಪೊಯಿನೂರು ಶಿಪ್ಪಿಂಗ್ ಕಂಪನಿಯ ಕಾರ್ಯಾಲಯ ಕಾರವಾರದ ಪೊರ್ಟ ಕಾಲೋನಿಯಲ್ಲಿರುತ್ತದೆ. ಆತನ ಕೆಲಕ್ಕೆ ಸಂಬಂದಿಸಿದ ದಾಖಲೆಗಳನ್ನು ಆತನು ಇಟ್ಟುಕೊಂಡಿರುತ್ತಾನೆ. ಪ್ರೇಮಕುಮಾರನಿಗೆ ನಿರಂತರವಾಗಿ ಕೆಲಸ ಬರುತ್ತಿರುವ ಬಗ್ಗೆ ನನಗೆ ಗೊತ್ತಿತ್ತು ಆದರೆ ಅದರ ವಿವರಗಳು ನನಗೆ ಗೊತ್ತಿರಲಿಲ್ಲ. ಈ ವಿಷಯವನ್ನು ಪ್ರೇಮಕುಮಾರನು ನನ್ನ ಬಳಿ ಹೇಳಿರುತ್ತಾನೆ ಹಾಗೂ ನಾನು ಸಹ ನೋಡಿರುತ್ತೇನೆ. ಪ್ರೇಮಕುಮಾರ ಮೃತ ಪಡುವ ಮೊದಲು ಆತನ 2 ಕಂಪನಿಗಳು

ಇದ್ದವು. 1 ನೇ ಆರೋಪಿಗೆ ಕೆಲಸ ಬರುತ್ತಿದ್ದ ಬಗ್ಗೆ ನನಗೆ ಗೊತ್ತಿಲ್ಲ. ಪ್ರೇಮಕುಮಾರನಿಗೆ ಕೆಲಸ ಬರುತ್ತಿರುವ ಬಗ್ಗೆ 1 ನೇ ಆರೋಪಿಗೆ 2 ನೇ ಆರೋಪಿತನು ಹೇಳುತ್ತಿದ್ದನು. ಈ ವಿಷಯವನ್ನು ಸಹ ಪ್ರೇಮಕುಮಾರನು ನನ್ನ ಬಳಿ ಹೇಳಿದ್ದನು. 15 ವರ್ಷಗಳ ಹಿಂದೆ 1 ನೇ ಆರೋಪಿ ಬಳಿ 2 ನೇ ಆರೋಪಿ ಕೆಲಸಕ್ಕೆ ಇದ್ದನು. 1 ನೇ ಆರೋಪಿಗೆ ನನ್ನ ತಮ್ಮನ ಮೇಲೆ ಯಾವುದೇ ದ್ವೇಷ ಇರಲಿಲ್ಲ ಎಂದರೆ ಸರಿಯಲ್ಲ. ಪ್ರೇಮಕುಮಾರ ಕಂಪನಿಯನ್ನು ಮುಂದುವರೆಸಿದರೆ, 1 ನೇ ಆರೋಪಿಗೆ ತೊಂದರೆ ಆಗುತ್ತದೆ ಎಂಬ ಭಯ ಆತನಿಗೆ ಎಂದಿಗೂ ಇರಲಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿಗೂ ಮತ್ತು ಪ್ರೇಮಕುಮಾರನಿಗೂ ವ್ಯವಹಾರದಲ್ಲಿ ಯಾವುದೇ ಸ್ಪರ್ದೆ ಅಥವಾ ಪೈಪೋಟಿ ಇರಲಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿ ಎಂದಿಗೂ 2 ನೇ ಆರೋಪಿತನ ಮೂಲಕ ಪ್ರೇಮಕುಮಾರನ ಬಗ್ಗೆ ಮಾಹಿತಿಯನ್ನು ಪಡೆಯುತ್ತಿರಲಿಲ್ಲ ಎಂದರೆ ಸರಿಯಲ್ಲ.

12. ಕೊಲ್ಲಾಪುರದ ಟ್ರಾವೇಲ್ ಏಜೆಂಟ್ ನ ಮೊಬೈಲ್ ನಂಬರ ನನಗೆ ಗೊತ್ತಿಲ್ಲ. ಟ್ರಾವೇಲ್ ಏಜೆಂಟ್ ನ ಮೊಬೈಲ್ ನಂಬರ ನನಗೆ ಗೊತ್ತಿಲ್ಲ, ಪೋಲಿಸನವರಿಗೆ ಗೊತ್ತು. ಸದರಿ ಮೊಬೈಲ್ ನ್ನು ನಾನು ಖುದ್ದಾಗಿ ಪರಿಶೀಲಿಸಿರುವುದಿಲ್ಲ. ಟ್ರಾವೇಲ್ ಏಜೆಂಟ್ ನ ಹೆಸರು ನನಗೆ ಗೊತ್ತಿಲ್ಲ ಆದರೆ ಏಜೇನ್ಸಿಯ ಹೆಸರು ಶಿವಶಕ್ತಿ ಆಗಿರುತ್ತದೆ. ಈ ಬಗ್ಗೆ ಟ್ರಾವೇಲ್ ಏಜೆಂಟ್ ನನ್ನ ಬಳಿ ದಿಃ 19-10-2018 ರಂದು ಬೆಳಿಗ್ಗೆ 08-30 ಕ್ಕೆ ಹೇಳಿರುತ್ತಾನೆ. ಆ ಸಮಯದಲ್ಲಿ ನಾನು, ಪೋಲಿಸರು, ಪ್ರೇಮಕುಮಾರನ ಸಂಬಂಧಿ ಹಾಗೂ ನಾವು ಹೋಗಿದ್ದ ವಾಹನದ ಚಾಲಕನು ಇದ್ದನು. ನಾವು ಖಾಸಗಿ ವಾಹನದಲ್ಲಿ ಕೊಲ್ಲಾಪುರಕ್ಕೆ ಹೋಗಿರುತ್ತೇವೆ. ಸದರಿ ವಾಹನದ ಬೆಂಗಳೂರಿನ ರಿಜಿಸ್ಟ್ರೇಷನ ವಾಹನವಾಗಿರುತ್ತದೆ. ಸದರಿ ವಾಹನಕ್ಕೆ ಬಾಡಿಗೆ ರೂ.38,000/- ಆಗಿರುತ್ತದೆ ಹಾಗೂ ಅದನ್ನು ನಾನೇ ನೀಡಿರುತ್ತೇನೆ. ಈ ಬಗ್ಗೆ ನಾನು ರಶೀದಿಯನ್ನು ಪಡೆದಿಡರುವುದಿಲ್ಲ. ನಾವು ಯಾವುದೇ ವಾಹನವನ್ನು ಬಾಡಿಗೆಗಾಗಿ ಪಡೆದಿರುವುದಿಲ್ಲದಿರುವುದರಿಂದ ನಾನು ಯಾವುದೇ ರಶೀದಿಯನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ನಮ್ಮೊಂದಿಗೆ ಬಂದಿದ್ದ ಪೋಲಿಸರಲ್ಲಿ ಒಬ್ಬರು ಯುನಿಪಾರಂನಲ್ಲಿ ಇದ್ದರು, ಇನ್ನೊಬ್ಬರು ಕಲರ್ ಡ್ರೆಸನಲ್ಲಿದ್ದರು. ನಾವು ಇಲ್ಲಿಂದ ಮೊದಲು ಸತಾರಕ್ಕೆ ಹೋಗಿ, ಸತಾರದಿಂದ ಬೆಳಗಾವಿಗೆ ಬಂದು, ಬೆಳಗಾವಿಯಿಂದ ಕೊಲ್ಲಾಪುರಕ್ಕೆ ಹೋಗಿರುತ್ತೇವೆ. ನಾವು ಬೆಳಗಾವಿಗೆ ಬಂದಾಗ ಈ ಪ್ರಕರಣದ ಮಾಹಿತಿ ಸಿಕ್ಕಿರುತ್ತದೆ. ಅದರಂತೆ ನಾವು ಕೊಲ್ಲಾಪುರಕ್ಕೆ ಹೋಗಿರುತ್ತೇವೆ. ಟ್ರಾವೇಲ್ ಏಜೆಂಟ್ ಹೇಳಿದ ವಿಚಾರವನ್ನು ನಮ್ಮೊಂದಿಗೆ ಬಂದಿದ್ದ ಪೋಲಿಸರು ಬರೆದುಕೊಂಡಿರುತ್ತಾರೆ. ಪೋಲಿಸರು ಯಾವುದೇ ಹೇಳಿಕೆಯನ್ನು ಬರೆದುಕೊಂಡಿಲ್ಲ ಎಂದರೆ

ಸರಿಯಲ್ಲ. ನಾವು ಎಂದಿಗೂ ಸತಾರ, ಬೆಳಗಾವಿ ಮತ್ತು ಕೊಲ್ಲಾಪುರಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ. ಕೊಲ್ಲಾಪುರದಲ್ಲಿ ನಮಗೆ ಯಾವುದೇ ಏಜೆಂಟ್ ಸಿಕ್ಕಿರುವುದಿಲ್ಲ ಹಾಗೂ ಯಾರು ಸಹ 2 ನೇ ಆರೋಪಿ ನನ್ನ ಬಳಿ ಬಂದು, ನನ್ನ ಮೊಬೈಲ್ ತೆಗೆದುಕೊಂಡು ತನ್ನ ಹೆಂಡತಿಗೆ ಹಾಗೂ 1 ನೇ ಆರೋಪಿಗೆ ಕರೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

13. 2 ನೇ ಆರೋಪಿ ಕಾರನ್ನು ನಿಲ್ಲಿಸಿದ ಗ್ಯಾರೇಜ್ ನ ಹೆಸರು ಇಂಡಿಯನ್ ಗ್ಯಾರೇಜ್ ಆಗಿರುತ್ತದೆ. ಚಾಸಾ–32 ರವರು ಮೊಬೈಲ್ ಯಾವ ಕಂಪನಿಯದು ಎಂದು ನನಗೆ ನೆನಪಿಲ್ಲ. ಚಾಸಾ–32 ರವರ ಮೊಬೈಲನಲ್ಲಿ 2 ನಿಮಿಷಗಳ ಸಂಭಾಷಣೆ ಇರುತ್ತದೆ ಹಾಗೂ ಸದರಿ ಸಂಭಾಷಣೆಯು ಹಿಂದಿಯಲ್ಲಿರುತ್ತದೆ. ಸಂಭಾಷಣೆಯು ಯಾವ ದಿನಾಂಕದ್ದು ಎಂದು ನಾನು ನೋಡಿರುವುದಿಲ್ಲ. ಮಾರುತಿ ಜೆನ್ ಕಾರನ್ನು ನಾನು ಕೊಲ್ಲಾಪುರದಲ್ಲಿ ನೋಡಿರುವುದಿಲ್ಲ, ಕಾರವಾರದಲ್ಲಿ ನೋಡಿರುತ್ತೇನೆ. ಸಂಭಾಷಣೆಯನ್ನು ಕೇಳಿದ ನಂತರ ಅದನ್ನು ದಾಖಲಿಸಿದ ಬಗ್ಗೆ ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ಚಾಸಾ–32 ರವರ ಮೊಬೈಲನ್ನು ಜಪ್ತಪಡಿಸಿಕೊಂಡಿರುವುದಿಲ್ಲ. ನಾನು ಚಾಸಾ–32 ರವನ್ನು ಭೇಟಿಯಾಗಿಲ್ಲ ಆತ ನಮ್ಮ ಬಳಿ ತನ್ನ ಮೊಬೈಲನಲ್ಲಿದ್ದ ಸಂಭಾಷಣೆಯನ್ನು ಕೇಳಿಸಿಲ್ಲ ಎಂದರೆ ಸರಿಯಲ್ಲ. 2 ನೇ ಆರೋಪಿ ಎಂದಿಗೂ ಪೋಲಿಸರ ಮುಂದೆ 1 ನೇ ಆರೋಪಿ ನನಗೆ ಪ್ರೇಮಕುಮಾರನನ್ನು ಕೊಲೆ ಮಾಡಲು ಹೇಳಿದ್ದ, ಕೆಲಸ ಕೊಡುತ್ತೇನೆ ಎಂದು ಹೇಳಿದ್ದ ಮತ್ತು ಬ್ಯಾಂಕ್ ಖಾತೆಗೆ 2 ಲಕ್ಷ ಹಣ ಜಮಾ ಮಾಡುತ್ತೇನೆ ಎಂದು ಹೇಳಿದ್ದ ಎಂದು ಹೇಳಿರುವುದಿಲ್ಲ ಎಂದರೆ ಸರಿಯಲ್ಲ. 2 ನೇ ಆರೋಪಿ ಎಂದಿಗೂ 1 ನೇ ಆರೋಪಿ ದಾಂಡೇಲಿಯ ಕೋಗಿಲ ಭವನದಲ್ಲಿ ಭೇಟಿಯಾಗಿ ಪ್ರೇಮಕುಮಾರನಿಂದ ನನಗೆ ವ್ಯವಹಾರದಲ್ಲಿ ತೊಂದರೆ ಆಗುತ್ತಿದೆ, ಆತನನ್ನು ಹೇಗಾದರು ಮಾಡಿ ಕೊಲೆ ಮಾಡಬೇಕೆಂದು ಎಂದು ಹೇಳಿದ್ದ ಎಂದು ಹೇಳಿರಲಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ 2 ನೇ ಆರೋಪಿ ನಾವು 1 ನೇ ಆರೋಪಿಗೆ ವಿಷಯ ತಿಳಿಸಿದಾಗ, ಆತ ಇದೇ ಸರಿಯಾದ ಸಮಯ ಆತನನ್ನು ಹೇಗಾದರು ಮಾಡಿ ಮುಗಿಸಿ ಬಿಡಿ ಎಂದು ಹೇಳಿದ್ದ ಹಾಗೂ ಕೊಲೆ ಮಾಡುವ ಸಲುವಾಗಿ 1 ನೇ ಆರೋಪಿ ಜೆನ್ ಕಾರನ್ನು ಖರೀದಿ ಮಾಡಿದ್ದ ಎಂದು ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ 2 ನೇ ಆರೋಪಿ ದಿಃ 15–10–2018 ರಂದು 1 ನೇ ಆರೋಪಿ ಖರೀದಿ ಮಾಡಿದ ಜೆನ್ ಕಾರನ್ನು ತೆಗೆದುಕೊಂಡು, ನಾನು ಮತ್ತು 3 ನೇ ಆರೋಪಿ ಕೊಲೆ ಮಾಡುಲು ಉದ್ದೇಶಿಸಿದ ಸ್ಥಳಕ್ಕೆ ಹೋಗಿ, ಪರಿಶೀಲನೆ ಮಾಡಿಕೊಂಡು ಬಂದಿದ್ದೇವು ಎಂದು ಹೇಳಿರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿಯನ್ನು 4 ನೇ ಆರೋಪಿ ಗೋವಾಕ್ಕೆ ಕರೆದುಕೊಂಡು ಹೋಗಿದ್ದ

ಎಂದು ಪೋಲಿಸರು ನನ್ನ ಬಳಿ ಹೇಳಿದ್ದರು. ಈ ಪ್ರಕರಣದಲ್ಲಿ ನನ್ನ ತಮ್ಮನ ಮರಣಕ್ಕೆ ಸಂಬಂಧಿಸಿದಂತೆ 1 ನೇ ಆರೋಪಿಯನ್ನು ಸಿಕ್ಕಿಸಲು ಪೋಲಿಸರು ಮುಂದೆ ಹೇಳಿಕೆಯನ್ನು ನೀಡಿ, ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಮ್ಮ ಮರಣಕ್ಕೂ ಹಾಗೂ 1 ನೇ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನನ್ನ ತಮ್ಮನ ಸಾವಿನಿಂದ 1 ನೇ ಆರೋಪಿಗೆ ಯಾವುದೇ ಲಾಭ ಇಲ್ಲ ಎಂದರೆ ಸರಿಯಲ್ಲ. ನನಗೆ 1 ನೇ ಆರೋಪಿತನ ಮೇಲೆ ದ್ವೇಷ ಇರುತ್ತದೆ ಎಂದರೆ ಸರಿಯಲ್ಲ. ನನ್ನ ತಮ್ಮ ಅಂಬೇಡ್ಕರ ಸೇನೆ ಎನ್ನುವ ಸಂಘಟನೆ ಎಂದರೆ ಸರಿ. ಸದರಿ ಸಂಘಟನೆಯಲ್ಲಿ 2 ವರ್ಷಗಳಿಂದ ಆತ ಮುಖ್ಯಸ್ಥನಿದ್ದ. ಅಂಬೇಡ್ಕರ ಸೇನೆ ಹೋರಾಟಗಳು, ಸತ್ಯಾಗ್ರಹಗಳನ್ನು ಮಾಡುತ್ತದೆ ಎಂದರೆ ಸರಿ. ಇದರಿಂದಾಗಿ ಪ್ರೇಮಕುಮಾರ ಸಾಕಷ್ಟು ವಿರೋಧಿಗಳನ್ನು ಕಟ್ಟಿಕೊಂಡಿದ್ದ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 2 ಮತ್ತು 3 ನೇ ಆರೋಪಿತರ ಪರ ಶ್ರೀ ಎಲ್.ಎಸ್ .ಕೆ .ವಕೀಲರಿಂದ.**

14. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಈ ನಾನು ನ್ಯಾಯಾಲಯಕ್ಕೆ 5-6 ಸಲ ಬಂದಿರುತ್ತೇನೆ. ಫ್ರಾಸಾ-1 ಮತ್ತು 2 ರವರ ಸಾಕ್ಷಿ ವಿಚಾರಣೆಯ ದಿನ ನಾನು ನ್ಯಾಯಾಲಯಕ್ಕೆ ಬಂದಿರುತ್ತೇನೆ. ಸದರಿ ಸಾಕ್ಷಿದಾರರ ವಿಚಾರಣೆಯ ಕಾಲಕ್ಕೆ ನಾನು ಅವರಿಗೆ ಕಾಣುವಂತೆ ನ್ಯಾಯಾಲಯದ ಬಾಗಿಲಲ್ಲಿ ನಿಂತಿದ್ದೆ ಹಾಗೂ ಅವರು ನೀಡಿದ ಸಾಕ್ಷ್ಯವನ್ನು ಕೇಳಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿದಾರರನ್ನು ನಾನೇ ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿರುತ್ತೇನೆ ಎಂದರೆ ಸರಿಯಲ್ಲ. ಫ್ರಾಸಾ-1 ಮತ್ತು 2 ರವರು ನನಗೆ ಪರಿಚಯದವರು ಎಂದರೆ ಸರಿಯಲ್ಲ. ಅದೇ ರೀತಿ ನನ್ನ ಮಾವನಿವರಿಗೂ ಪರಿಚಯದವರು ಎಂದರೆ ನನಗೆ ಗೊತ್ತಿಲ್ಲ. ಫ್ರಾಸಾ-1 ಮತ್ತು 2 ರವನ್ನು ನಾನು ಈ ಮೊದಲು ಪೋಲಿಸ್ ಠಾಣೆಯಲ್ಲಿ ನೋಡಿರುತ್ತೇನೆ. ಫ್ರಾಸಾ-2 ರವನ್ನು ದಿಃ 23-10-2018 ರಂದು ಬೆಳಿಗ್ಗೆ 09-00 ಗಂಟೆಗೆ ಪೋಲಿಸ್ ಠಾಣೆಯಲ್ಲಿ ನೋಡಿರುತ್ತೇನೆ. ಅದೇ ರೀತಿ ಫ್ರಾಸಾ-1 ರವನ್ನು ನೋಡಿದ ದಿನಾಂಕ ನನಗೆ ನೆನಪಿಲ್ಲ. ಫ್ರಾಸಾ-1 ಮತ್ತು 2 ರವರು ನನಗೆ ಪರಿಚಯದವರಾಗಿದ್ದು, ಈ ಪ್ರಕರಣಕ್ಕೆ ಅನುಕೂಲವಾಗುವಂತೆ ನಾನೇ ಠಾಣೆಗೆ ಕರೆದುಕೊಂಡು ಹೋಗಿರುತ್ತೇನೆ ಎಂದರೆ ಸರಿಯಲ್ಲ.

15. ನಮ್ಮ ತಂದೆ-ತಾಯಿಗೆ ಇಬ್ಬರು ಗಂಡು ಮಕ್ಕಳು ಹಾಗೂ ನಾಲ್ಕು ಜನ ಹೆಣ್ಣು ಮಕ್ಕಳು. ನಮ್ಮ ತಂದೆ-ತಾಯಿ ಬೊಂಬಾಯಿಂದ ಬಂದು ಇಲ್ಲಿ ನೆಲೆಸಿರುತ್ತಾರೆ. ನಾನು ಎಸ್.ಎಸ್.ಎಲ್.ಸಿ

ವರೆಗೆ ಓದಿರುತ್ತೇನೆ. ನನ್ನ ತಮ್ಮ ಮೃತ ಪ್ರೇಮಕುಮಾರ ಬಿ.ಕಾಂ ಪಧವೀದರ. ನನ್ನ ತಮ್ಮ ಪ್ರೇಮಕುಮಾರ ಬಂದಿರಿನಲ್ಲಿ ಗುತ್ತಿಗೆ ಕೆಲಸ ಮಾಡುತ್ತಿದ್ದ. ಆ ರೀತಿ ಗುತ್ತಿಗೆ ಕೆಲಸ ಮಾಡಲು ನನ್ನ ತಮ್ಮ ಪ್ರೇಮಕುಮಾರನಿಗೆ ಲೈಸೆನ್ಸ ಇರಲಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಕಂಪನಿಯ ಹೆಸರಿನಲ್ಲಿರುತ್ತದೆ ಎಂದು ನುಡಿಯುತ್ತಾರೆ. ಗುತ್ತಿಗೆ ಕೆಲಸ ಎಂದರೆ ಹಡಗಿನಿಂದ ಬಂದ ಸರಕುಗಳನ್ನು ಲೋಡಿಂಗ್ ಹಾಗೂ ಅನ್ ಲೋಡಿಂಗ್ ಮಾಡುವ ಗುತ್ತಿಗೆ ಕೆಲಸವಾಗಿರುತ್ತದೆ. ಸುಮಾರು 15 ವರ್ಷಗಳಿಂದ ಗುತ್ತಿಗೆ ಕೆಲಸ ಮಾಡುತ್ತಿರುತ್ತಾನೆ. ಈ ಸಂಬಂದ ಯಾವುದೇ ದಾಖಲೆಯನ್ನು ನಾನು ಪೋಲಿಸರಿಗೆ ನೀಡಿರುವುದಿಲ್ಲ. ನನ್ನ ತಮ್ಮ ಬಂದರಿನಲ್ಲಿ ಯಾವುದೇ ಗುತ್ತಿಗೆ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಪ್ರೇಮಕುಮಾರ ಸಾಯುವ ಪೂರ್ವದಲ್ಲಿ 6 ವರ್ಷಗಳ ಹಿಂದೆ ನಾವು ಪ್ರತ್ಯೇಕವಾಗಿರುತ್ತೇವೆ.

16. ನನ್ನ ಕೆಲಸದ ಸಮಯ ಬೆಳಿಗ್ಗೆ 08-00 ರಿಂದ 05-00 ಗಂಟೆಯ ವರೆಗೆ ಇರುತ್ತದೆ. ಪ್ರತಿನಿತ್ಯ ಬೆಳಿಗ್ಗೆ ಕೆಲಸಕ್ಕೆ ಹೋಗಿ ಸಂಜೆ ಮನೆಗೆ ಹೋಗುತ್ತೇನೆ ಎಂದರೆ ಸರಿ. ನಾನು ಮತ್ತು ಪ್ರೇಮಕುಮಾರ ಪ್ರತಿದಿನ ಭೇಟಿ ಮಾಡುತ್ತಿದ್ದೇವು. ನನ್ನ ಮನೆಯಿಂದ ಪ್ರೇಮಕುಮಾರನ ಮನೆ ಸುಮಾರು 500 ಮೀಟರ ಅಂತರದಲ್ಲಿರುತ್ತದೆ ಹಾಗೂ ನಾವಿಬ್ಬರೂ ಪೋರ್ಟ ಕಾಲೋಯಲ್ಲಿ ಕಂಪನಿ ಕಡೆಯಿಂದ ನೀಡಿದ ಕ್ವಾರ್ಟಸನಲ್ಲಿರುತ್ತೇವೆ. ಪ್ರೇಮಕುಮಾರನ ಮಾವನಿಗೆ ನೀಡಲಾದ ಕ್ವಾರ್ಟಸನಲ್ಲಿ ಪ್ರೇಮಕುಮಾರ ವಾಸವಾಗಿದ್ದ, ಅವನ ಮಾವ ಬೇರೆ ಕಡೆ ವಾಸವಾಗಿದ್ದನು.

**<u>ಪಾಟೀ ಸವಾಲುಃ ನ್ಯಾಯಾಲಯದ ಅವಧಿ ಮುಗಿದಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

ಸಹಿ ಇದೆ/-

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ